**PW-1**

**ಐದನೇ ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಲಯ, ಮೇಯೋಹಾಲ್ ವಿಭಾಗ, ಬೆಂಗಳೂರು.**

**ದಿಃ 10.09.2024 ರಂದು ಸಾಕ್ಷಿದಾರರಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಪಾಟೀ ಸವಾಲು : 2 ನೇ ಎದುರುದಾರ ಪರ ವಕೀಲರಿಂದಃ**

2020 ರಲ್ಲಿ ನಾನು ಕಾರು ಖರೀದಿಸಿದ್ದೆ. ಅದಕ್ಕೆ ವಿಮೆ ಇದೆ, ಅದರ ಪ್ರತಿಯನ್ನು ಸಲ್ಲಿಸಿಲ್ಲ. ಅದನ್ನು ಸಲ್ಲಿಸುತ್ತೇನೆ. ಅಪಘಾತವಾದಾಗ ನಾನೇ ವಾಹನ ಚಲಾಯಿಸುತ್ತಿದ್ದೆ. ನಿಪಿ.-6 ರಂತೆ ರಸ್ತೆಯಲ್ಲಿ ತಿರುವಿತ್ತು ಎಂದರೆ, ಅಪಘಾತ ಸ್ಥಳದಲ್ಲಿ ತಿರುವು ಇತ್ತು ಎನ್ನುತ್ತಾರೆ. ರಸ್ತೆಯ ಅಗಲ ಸುಮಾರು 20 ಅಡಿ ಇರಬಹುದು. ನಾನು 40 ಕಿ.ಮೀ. ವೇಗದಲ್ಲಿ ವಾಹನ ಚಲಾಯಿಸುತ್ತಿದ್ದೆ. ನನ್ನ ವಾಹನದ ಮುಂದೆ ಬೇರೆ ಯಾವ ವಾಹನ ಇರಲಿಲ್ಲ. ಎದುರಿನಿಂದ ಭಾರಿ ವಾಹನ ಬರುತ್ತಿತ್ತು. ರಸ್ತೆಯಲ್ಲಿ ತಿರುವಿದ್ದ ಕಾರಣ ಭಾರಿ ವಾಹನ ನಿಧಾನವಾಗಿ ಚಲಾಯಿಸುತ್ತಿದ್ದರು ಎಂದರೆ ಸರಿಯಲ್ಲ, ಸಾಕ್ಷಿ ಇಳಿಜಾರು ಇತ್ತು ಎನ್ನುತ್ತಾರೆ. ರಸ್ತೆ ಸಮತಟ್ಟವಾಗಿತ್ತು ಎಂದರೆ ಸರಿಯಲ್ಲ. ನಿಮ್ಮ ಅಜಾಗರೂತೆಯಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಲಾರಿ/ಭಾರಿ ವಾಹನ ನಿಮ್ಮ ವಾಹದ ಮುಂದೆ ಹೋಗುತ್ತಿತ್ತು, ನೀವೇ ಡಿಕ್ಕಿ ಪಡಿಸಿದ್ದೀರಿ ಎಂದರೆ ಸರಿಯಲ್ಲ. ನನ್ನ ವಾಹನಕ್ಕೆ ಆಗಿರುವ ಜಖಂ ಖರ್ಚಿನ ಎಸ್ಟಿಮೇಶನ್ ಮಾಡಿಸಿದ್ದೇವೆ, ಅದರ ವಿವರವನ್ನು ವಿಮಾ ಕಂಪನಿಗೆ ತಿಳಿಸಿಲ್ಲ. ಎಸ್ಟಿಮೇಶನ್ ಸಲ್ಲಿಸಿದ್ದೇನೆ. ನಾನು ವಿಮಾ ಕಂಪನಿಯಿಂದ ಯಾವುದೆ ಪರಿಹಾರ ಪಡೆದಿಲ್ಲ ಎಂಬುದನ್ನು ತೋರಿಸಲು ದಾಖಲೆಯನ್ನು ಸಲ್ಲಿಸುತ್ತೇನೆ. ನಿಪಿ.-7 ಜೆರಾಕ್ಸ ಪ್ರತಿಯಾಗಿದ್ದು, ಅದಕ್ಕೆ ಮೊಹರು ಹಾಕಿದ್ದೀರಿ ಎಂದರೆ ಸರಿಯಲ್ಲ. ನಿಪಿ.-7 ನ್ನು ನೀಡಿರುವ ಸಂಸ್ಥೆಯವರ ವಿಚಾರಣೆ ಮಾಡಿಸುತ್ತೇನೆ. ವಿಮಾ ಕಂಪನಿಯಿಂದ ಪರಿಹಾರ ಪಡೆದುಕೊಂಡಿದ್ದೀರಿ ಎಂದರೆ ಸರಿಯಲ್ಲ. ಪರಿಹಾರ ಪಡೆಯುಲು ಸುಳ್ಳು ಪ್ರಕರಣ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ. ಹೇ.ಕೇ. ಸರಿ ಇದೆ.

ಐದನೇ ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಲಯ,
ಮೇಯೋಹಾಲ್ ವಿಭಾಗ, ಬೆಂಗಳೂರು.